**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 741/2020**

ಪ್ರಾಸಾ4
ಚಾಸಾ4

ಸಾಕ್ಷಿಯ ಹೆಸರುಃ ಸೂರ್ಯ
ತಂದೆ /ಗಂಡನ ಹೆಸರು ಃ ಚಂದ್ರುಶೇಖರ
ವಯಸ್ಸು ಃ 25
ಉದ್ಯೋಗ ಃ ವ್ಯವಸಾಯ
ವಾಸ ಸ್ಥಳ ಃ ಹೆಬ್ಬಾಲೆ ಗ್ರಾಮ, ಕುಶಾಲನಗರ.

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 20.01.2025**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ಚಾಸಾ 1 ರವರು ನನ್ನ ಚಿಕ್ಕಪ್ಪ . ಚಾಸಾ 2 ರವರು ನೋಡಿ ಪರಿಚಯ. ಚಾಸಾ 3 ರವರ ಪರಿಚಯ ಇಲ್ಲ. ಆರೋಪಿ ನೋಡಿ ಪರಿಚಯ.

ದಿಃ 24.07.2020 ರಂದು ನಾನು ಮತ್ತು ಚಾಸಾ 1 ರವರು ಬೆಳಗ್ಗೆ 11.30 ಗಂಟೆ ಸಮಯಕ್ಕೆ ಪಂಚಾಯಿುತಿ ಕಚೇರಿ ಕಡೆಗೆ ಹೆಬ್ಬಾಲೆಯಲ್ಲಿ ಹೋಗುತ್ತಿರುವಾಗ ಚಾಸಾ 5 ರವರ ಅಂಗಡಿ ಮುಂದೆ ಹೋಗುತ್ತಿದ್ದಾಗ ಆರೋಪಿ ಚಾಸಾ 1 ರವರನ್ನು ತಡೆದು ಬೋಳೆ ಮಗನೆ , ನಿನ್ನ ಅವ್ವನನ್ನು ಕೇಯಿುಸುತ್ತೇನೆ ಎಂದು ಅವಾಚ್ಯ ಶಬ್ದಗಳಿಂದ ಬೈದು, ಬೋಡಸ್ ಕಲ್ಲನ್ನು ತೆಗೆದುಕೊಂಡು ಚಾಸಾ 1 ರವರ ಎಡಭಾಗದ ಬುಜಕ್ಕೆ ಹೊಡೆದು ತಲ್ಲಿ ಬೀಳಿಸಿ, ಬಲಕಾಲು ತುಳಿದು, ನೋವು ಪಡಿಸಿ ಕೊಲೆ ಮಾಡದೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದಾಗ ಚಾಸಾ 1 ರವರು ಪ್ರಜ್ಞೆ ತಪ್ಪಿ ಬಿದ್ದಿದ್ದು, ನಾನು ಚಾಸಾ 2, ಚಾಸಾ 6 ರವರು ಚಾಸಾ 1 ರವರನ್ನು ಉಪಚರಿಸಿ ಯಾವುದೋ ಒಂದು ಕಾರಿನಲ್ಲಿ ಕುಶಾಲನಗರ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿರುತ್ತಾರೆ. ನಂತರ ಚಾಸಾ 1 ರವರು ಆರೋಪಿಯ ವಿರುದ್ದ ದೂರು ನೀಡಿರುವುದಾಗಿ ನನಗೆ ತಿಳಿದು ಬಂದಿರುತ್ತದೆ .

ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಬೋಡಸ್ ಕಲ್ಲನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ಮು ಮಾ **1** ಎಂದು ಗುರುತಿಸಲಾಗಿದೆ. ಈ ಮೇಲೆ ಹೇಳಿದಂತೆ ಹೇಳಿಕೆಯನ್ನು ತನಿಖಾಧಿಕಾರಿಗಳ ಮುಂದೆ ದಿಃ **29.07.2020** ರಂದು ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರಿದ್ದು ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿುತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.